'ಕಮಕ್... ಕಿಮಕ್...' ಎನ್ನಲಿಲ್ಲ.

ಮೂರನೆಯ ಸಲ ನಾನು ವಳಗೆರೆಯನ್ನು ಹೊಕ್ಕದ್ದು ನನ್ನ ಪದವಿ ಮುಗಿಸಿ, ಗೌರೀಪುರದ ತಾಲ್ಲೂಕು ಕಚೇರಿಯಲ್ಲಿ ಉದ್ಯೋಗಸ್ಥನಾದ ಮೂರ್ನಾಲ್ಕು ತಿಂಗಳ ನಂತರ... ಅದೂ ಭಾಸ್ಕರರಾಯರ ಮನೆಗೆ ಹೋದದ್ದಲ್ಲ; ಹೋಗುವುದಕ್ಕಾಗಿಯೂ ವಳಗೆರೆಗೆ ಹೋದದ್ದಲ್ಲ. ಪ್ರೈಮರಿ ಶಾಲೆಯಲ್ಲಿ ನನ್ನ ಕ್ಲಾಸ್‌ಮೇಟ್ ಆಗಿದ್ದ ಆನಂದನನ್ನು ಕಾಣುವ ಸಲುವಾಗಿ.

ಆದರದಿಂದಲೇ ಆನಂದ ನನ್ನನ್ನು ಸ್ವಾಗತಿಸಿದ. ಆನಂದನ ಅಪ್ಪ ತೀರಿಕೊಂಡಿದ್ದ. ಆನಂದ ಅಪ್ಪನೂ ಆಗಿದ್ದ. ಇದ್ದ ಒಂದು ಎಕರೆಯಷ್ಟು ಅಡಿಕೆ ತೋಟದ ವಾಗಾಯ್ತು ಮಾಡಿಕೊಂಡಿದ್ದ. 'ತಿಂಗಳಾ ತಿಂಗಳಾ ನಿನಗೆ ಪಗಾರು ಬರುತ್ತದೆ. ಮನಸ್ಸು ಮಾಡಿದರೆ ಮೇಲ್ಸಂಪಾದನೆಯೂ ಸಿಗುತ್ತದೆ. ನನ್ನ ಪರಿಸ್ಥಿತಿ ನೋಡು: ವರ್ಷಕ್ಕೊಮ್ಮೆ ಬೆಳೆ. ಅದೂ ಅಡಿಕೆ ಮರಕ್ಕೆ ಕೊಳೆ ಪಳೆ ರೋಗ ಇಲ್ಲದೆ ಇದ್ದರೆ. ಕೈಗೆ ಬಂದ ಬೆಳೆಗೂ ಸರಿಯಾದ ಬೆಲೆ ಸಿಗುತ್ತದೆ ಎಂದೇನೂ ಇಲ್ಲ. ಧಾರಣೆಯಲ್ಲಿ ಸದಾ ಏರುಪೇರು. ಹೇಗೋ ಸಾಗುತ್ತಿದೆ ಬದುಕು..ಸಾಗಲೇಬೇಕಲ್ಲಾ' ಎಂದ ಆನಂದ.

ವಳಗೆರೆಯ ಕೆರೆಯ ದಂಡೆಯ ಮೇಲೆ ಕುಳಿತು ಗಂಟೆಗಟ್ಟಲೆ ಮಾತನ್ನಾಡಿದ ಆನಂದ. ವಳಗೆರೆಯ ಒಳಗನ್ನು ತೆರೆದಿಡಲು ಯತ್ನಿಸಿದ.

'ನಮ್ಮದೂ ಸೇರಿ ವಳಗೆರೆಯಲ್ಲಿ ಒಟ್ಟು ಒಂಬತ್ತು ಮನೆಗಳು. ಭಾಸ್ಕರರಾಯರನ್ನು ಹೊರತುಪಡಿಸಿದರೆ ವಳಗೆರೆಯಲ್ಲಿ ಉಳಿದವರೆಲ್ಲಾ ಚಿಕ್ಕ ಹಿಡುವಳಿದಾರರು. ಹತ್ತು ಗುಂಟೆಯಿಂದ ಹೆಚ್ಚೆಂದರೆ ಎರಡು ಎಕರೆಯವರೆಗೆ ಅಡಿಕೆ ತೋಟ ಹೊಂದಿದವರು. ಆ ಭಾಸ್ಕರರಾಯರನ್ನುಳಿದು ಮತ್ತೆಲ್ಲರೂ ದುಡಿಮೆಗಾರರು. ಭಾಸ್ಕರರಾಯರಿಗೆ ಹತ್ತಿರ ಹತ್ತಿರ ಹತ್ತು ಎಕರೆಯಷ್ಟು ಅಡಿಕೆ ತೋಟವಿದೆ. ಇಪ್ಪತ್ತೈದು ಎಕರೆಯಷ್ಟು ಭತ್ತದ ಗದ್ದೆಯೂ ಇದೆ. ಆದರೆ ಆತ ದುಡಿಯುವುದಿಲ್ಲ; ಆಳುಕಾಳುಗಳಿಂದ ದುಡಿಸಿಕೊಳ್ಳುತ್ತಾನೆ. ಇದ್ದ ಇಬ್ಬರು ಗಂಡು ಮಕ್ಕಳು ಮನೆ ಬಿಟ್ಟು ಹೋಗಿದ್ದಾರೆ. ಈ ಭಾಸ್ಕರರಾಯನಿಗೆ ಹೆಣ್ಣಿನ ತೆವಲು. ಹೆಂಗಸರು ಅವನ ಮನೆ ಮೆಟ್ಟಿಲು ಏರಿದರೆ ಸಾಕು: ನೆರವು ನೀಡುವ ಸೋಗಿನಿಂದ ಅವರನ್ನು ತನ್ನ ಬುಟ್ಟಿಗೆ ಬೀಳಿಸಿಕೊಳ್ಳುತ್ತಾನೆ. ಊರಿನ ಯಾರ ಮನೆಗೂ ಆತ ಬರುವುದಿಲ್ಲ: ಊರಿನ ಯಾರೊಬ್ಬರೂ ಅವನ ಮನೆಯತ್ತ ಸುಳಿಯುವುದೂ ಇಲ್ಲ. ಒಂದು ಬಗೆಯಲ್ಲಿ ಆ ಭಾಸ್ಕರರಾಯನಿಗೂ ಈ ಊರಿಗೂ ಸಂಬಂಧವೇ ಇಲ್ಲ. ಆದರೂ ಆತ ವಳಗೆರೆಯವನು; ವಳಗೆರೆ ರಾಯರು ಎಂದೇ ಎಲ್ಲರೂ ಹೇಳುವುದು. ಎಂಥಾ ರಾಯತನವೋ ಏನು ಸುಡುಗಾಡೋ!'

'ಆದರೆ... ಅವರೇ ನನಗೆ ಸಹಾಯ ಮಾಡಿದವರು... ಗೌರೀಪುರದಲ್ಲಿ ಹಾಸ್ಟೆಲ್‌ನಲ್ಲಿ ಉಳಿಯಲು... ಅದೂ ದಮ್ಮಡಿ ಕಾಸು ಕೊಡದೆ ಪುಕ್ಕಟೆ ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟವರು' ನಡುವೆ ನಾನೆಂದೆ.

'ಅದು ನಿನ್ನ ಮೇಲಿನ ಅನುಕಂಪದಿಂದಲ್ಲ, ನಿನ್ನ ಚಿಕ್ಕಮ್ಮ ಅವರಿಗೆ ತನ್ನ ಸೆರಗನ್ನು ಹಾಸಿದ್ದರಿಂದ.'

ಆನಂದನ ಈ ಮಾತನ್ನು ನನ್ನ ಮನಸ್ಸು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಆದರೆ, ಈ ಬಗ್ಗೆ ಮತ್ತೆ ವಾದಕ್ಕಿಳಿಯುವುದು ಸರಿಯಲ್ಲ ಎನ್ನಿಸಿ ನಾನು ಸುಮ್ಮನಾದೆ.

'ನಿನ್ನ ಚಿಕ್ಕಮ್ಮ ಒಬ್ಬಳೇ ಅಲ್ಲ... ಮಂದಳ್ಳಿ ಮತ್ತು ಮಡೇಗದ್ದೆ, ಸಂಕದಳ್ಳಿ, ಕಲ್ಮನೆ ಮೊದಲಾದ ಮತ್ತೆ ಸುತ್ತಲಿನ ನಾಲ್ಕಾರು ಹಳ್ಳಿಗಳ ಅದೆಷ್ಟು ಮಂದಿ ಹೆಂಗಸರು ಆ ಭಾಸ್ಕರರಾಯನ ಕಾಮತೃಷೆಗೆ ಈಡಾಗಿದ್ದಾರೆಯೋ ಏನೋ... ಒಟ್ಟಿನಲ್ಲಿ ಆತ ನಮ್ಮ ವಳಗೆರೆಯ ಶಾಪ;